ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ

ಕ್ರಿಮಿನಲ್ ಮೊಕದ್ದಮೆ ನಂಃ 1297/2018

ಸಿ.ಡಬ್ಲ್ಯೂ-13 ಪಿ.ಡಬ್ಲ್ಯೂ-10

| | |
|---|---|
| ಸಾಕ್ಷಿಯ ಹೆಸರು | ಃ ಕರುಣೇಶಗೌಡ ಜೆ. |
| ತಂದೆಯ ಹೆಸರು | ಃ ಪಂಪನಗೌಡ |
| ವಯಸ್ಸು | ಃ 48 ವರ್ಷ |
| ಉದ್ಯೋಗ | ಃ ಪೋಲಿಸ ಇನ್ಸಪೆಕ್ಟರ, ಲೋಕಾಯುಕ್ತ ಪಿ.ಎಸ್. |
| ವಾಸಸ್ಥಳ | ಃ ಧಾರವಾಡ |

ದಿನಾಂಕಃ 30-01-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದಃ

ನಾನು ದಿ.08-05-2015 ರಿಂದ ದಿ.06-09-2018 ವರೆಗೆ ಹುನಗುಂದ ವೃತ್ತದಲ್ಲಿ ಸಿ.ಪಿ.ಐ. ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 25-02-2017 ರಂದು ಚಾಸಾ-12 ರವರಿಂದ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಪಡೆದುಕೊಂಡು ಪರಿಶೀಲಿಸಿರುತ್ತೇನೆ. ಅದೇ ದಿನ ಚಾಸಾ-6 ರವರು ಹಾಜರುಪಡಿಸಿದ ಸಮವಸ್ತ್ರದ ಜೇಬು ಹರಿದ ಶರ್ಟನ್ನು ಠಾಣೆಯಲ್ಲಿ ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಸಾಯಂಕಾಲ 5.00 ರಿಂದ 6.00 ವರೆಗೆ ಜಪ್ತಿ ಪಂಚನಾಮೆಯನ್ನು ಜರುಗಿಸಿ ಜೇಬು ಹರಿದ ಶರ್ಟನ್ನು ಜಪ್ತಿಪಡಿಸಿಕೊಂಡಿರುತ್ತೇನೆ. ಅದೇ ದಿನ ಜಪ್ತಿಪಡಿಸಿಕೊಂಡ ಮುದ್ದೆಮಾಲಿಗೆ ಸಂಬಂಧಿಸಿ ಸ್ವತ್ತಿನ ಪಟ್ಟಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿ: 26-02-2017 ರಂದು ಗುನ್ನೆ ಜಾಗೆಯ ಪಂಚನಾಮೆಯನ್ನು ಚಾಸಾ-6 ರವರು ತೋರಿಸಿದಂತೆ ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 9.00 ರಿಂದ 10.00 ವರೆಗೆ ಜರುಗಿಸಿ ಆ ಕಾಲಕ್ಕೆ ಒಂದು ಕಚ್ಚಾ ನಕಾಶೆ ಹಾಗು ಎರಡು ಛಾಯಾಚಿತ್ರಗಳನ್ನು ಸೆರೆಹಿಡಿದಿರುತ್ತೇನೆ. ಅದೇ ದಿನ ಚಾಸಾ-6 ಮತ್ತು 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿ: 23-03-2017 ರಂದು 1 ನೇ ಆರೋಪಿತನು ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬಾಗಲಕೋಟ ರವರಿಂದ ನೀರಿಕ್ಷಣಾ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾದ ಮೇರೆಗೆ ದಸ್ತಗೀರಿ ಕ್ರಮ ಜರುಗಿಸಿ ಆತನ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡು ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ. ದಿ: 03-04-2017 ರಂದು ವಾಹನದ ವಿವರ ಹಾಗು ವಾಹನದ ದಾಖಲಾತಿಗಳನ್ನು ಸ್ವತ್ತಿನಪಟ್ಟಿಯಲ್ಲಿ ಅಳವಡಿಸಿಕೊಳ್ಳಲು ಮಾನ್ಯ ನ್ಯಾಯಾಲಯಕ್ಕೆ ಪತ್ರವನ್ನು ಕೋರಿಕೊಂಡಿರುತ್ತೇನೆ. ದಿ: 23-03-2017 ರಂದು ಚಾಸಾ-1, 6 ಮತ್ತು 7 ರವರ ಪುನ: ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ದಿ: 03-03-2017 ರಂದು ಉಳಿದ ಆರೋಪಿತರ ಪತ್ತೆ ಕುರಿತು ಚಾಸಾ-6 ರವರನ್ನು ನೇಮಿಸಿ ವರದಿ ಪಡೆದಕೊಂಡಿರುತ್ತೇನೆ. ದಿ: 09-04-2017 ರಂದು ಉಳಿದ ಆರೋಪಿತರ ಪತ್ತೆ ಕುರಿತು ಚಾಸಾ-9 ರವರನ್ನು ನೇಮಿಸಿ ವರದಿ ಪಡೆದಕೊಂಡಿರುತ್ತೇನೆ. ದಿ: 15-05-2017 ರಂದು ಉಳಿದ ಆರೋಪಿತರ ಪತ್ತೆ ಕುರಿತು ಚಾಸಾ-10 ರವರನ್ನು ನೇಮಿಸಿ ವರದಿ ಪಡೆದಕೊಂಡಿರುತ್ತೇನೆ. ನಾನು ಸಹ ವೈಯಕ್ತಿಕ ತಪಾಸಣೆ ಮಾಡಿದ್ದು 3 ಜನ ಆರೋಪಿತರು ದೊರಕಿರುವುದಿಲ್ಲ. ದಿ: 08-01-2018 ರಂದು ಚಾಸಾ-8 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ: 25-02-2017 ರ ಠಾಣಾ ದಿನಚರಿ ಪ್ರತಿಯನ್ನು ಪ್ರಕರಣದಲ್ಲಿ ಅಳವಡಿಸಿಕೊಂಡಿರುತ್ತೇನೆ. ಜಪ್ತಿಪಡಿಸಿಕೊಂಡ ಉಸಕನ್ನು ಗಣಿ ಭೂ ವಿಜ್ಞಾನ

ಇಲಾಖೆಗೆ ದಿ: 28-04-2017 ರಂದು ಕೋರಿಕೆ ಪತ್ರದೊಂದಿಗೆ ಚಾಸಾ-8 ರವರ ಮುಖಾಂತರ ಕಳುಹಿಸಿ ಕೊಟ್ಟು ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ. ದಿ: 08-01-2018 ರಂದು ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ ತಲೆ ಮರೆಸಿಕೊಂಡ ಉಳಿದ 3 ಜನ ಆರೋಪಿತರ ಮೇಲೆ ವಾರಂಟ ಹೊರಡಿಸಲು ಕೋರಿಕೊಂಡಿರುತ್ತೇನೆ. ಆರೋಪಿತರನ್ನು ನೋಡಿದರೆ ನಾನು ಗುರುತಿಸಬಲ್ಲೆ. ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಗೈರ ಹಾಜರ ಇದ್ದು ಅವರ ಗುರುತಿಸುವಿಕೆಗೆ ಆರೋಪಿತರ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಜೇಬು ಹರಿದ ಶರ್ಟನ್ನು ಹಾಗು ಗಣಿ ಮತ್ತು ಭೂ ವಿಜ್ಞಾನಕ್ಕೆ ಕಳುಹಿಸಿದ ಮರಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಮ್.ಓ-1 ಮತ್ತು 2 ಎಂದು ಗುರುತಿಸಲಾಗಿರುತ್ತದೆ.

ಜಪ್ತಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನುಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-5(ಸಿ) ಎಂದು ಗುರುತಿಸಲಾಯಿತು. ಗುನ್ನೆ ಸ್ಥಳ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನುಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-1(ಸಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತಯಾರಿಸಿದ ಒಂದು ಕಚ್ಚಾ ನಕಾಶೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಡಿ) ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನುಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-1(ಇ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಸೆರೆಹಿಡಿದ ಎರಡು ಛಾಯಾಚಿತ್ರ ಹಾಗು ಛಾಯಾಚಿತ್ರದಲ್ಲಿರುವ ತನ್ನ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-2 ಮತ್ತು ನಿಪಿ-3 ಎಂದು ಗುರುತಿಸಲಾಗಿರುತ್ತದೆ. ಪಂಚನಾಮೆ ಮಾಡಿದ ಛಾಯಾಚಿತ್ರ ಹಾಗು ವಾಹನ ಬಿಡುಗಡೆ ಕಾಲಕ್ಕೆ ಸೆರೆಹಿಡಿದ ಛಾಯಾಚಿತ್ರವುಳ್ಳ ಸಿಡಿ ಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು. ಸ್ವತ್ತಿನ ಪಟ್ಟಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ನ್ಯಾಯಾಲಯಕ್ಕೆ ಕೋರಿಕೊಂಡ ಪತ್ರ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-14 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನುಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-14(ಎ) ಎಂದು ಗುರುತಿಸಲಾಯಿತು. ಚಾಸಾ-6, 9 ಮತ್ತು 10 ರವರ ಹೇಳಿಕೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-7 ರಿಂದ 9 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನುಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿ-7(ಬಿ), ನಿಪಿ-8(ಎ) ಹಾಗು ನಿಪಿ-9(ಎ) ಎಂದು ಗುರುತಿಸಲಾಯಿತು. ಠಾಣಾ ದಿನಚರಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-15 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನುಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-15(ಎ) ಎಂದು ಗುರುತಿಸಲಾಯಿತು. ಜಪ್ತಾದ ಮರಳನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರಿಗೆ ಕೋರಿಕೊಂಡ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-16 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನುಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-16(ಎ) ಮತ್ತು ನಿಪಿ-16(ಬಿ) ಎಂದು ಗುರುತಿಸಲಾಯಿತು. ಮಾನ್ಯ ನ್ಯಾಯಾಲಯದ ಆದೇಶದಂತೆ ಎರಡು ವಾಹನಗಳ ಬಿಡುಗಡೆ ಕಾಲಕ್ಕೆ ಸೆರೆಹಿಡಿದ ಎರಡು ಛಾಯಾಚಿತ್ರಗಳನ್ನು ಈಗಾಗಲೇ ಅವುಗಳನ್ನು ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಗಿರುತ್ತದೆ.

1 ನೇ ಆರೋಪಿ ಸ್ವಖುಷಿ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-17 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನುಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-17(ಎ) ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ</u> **1** ರಿಂದ **4** ನೇ ಆರೋಪಿತರ ಪರ ಶ್ರೀ ಬಿ.ಎನ್.ಎಮ್. ವಕೀಲರಿಂದ ಃ

ಘಟನೆ ಬಗ್ಗೆ ನನಗೆ ಬಾತ್ಮಿ ಮಾಹಿತಿ ಎಷ್ಟು ಗಂಟೆಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಯಾವ ಸಿಬ್ಬಂದಿ ಹೋಗಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿರುವುದಿಲ್ಲ ನನ್ನ ಸಿಬ್ಬಂದಿ ವರ್ಗದವರು ಸೃಷ್ಟಿಸಿದ ಖೊಟ್ಟಿ ಘಟನೆಗೆ ನಾನು ಅವರಿಗೆ ಸಹಾಯ ಮಾಡುತ್ತಿದ್ದೇನೆಂದರೆ ಸರಿಯಲ್ಲ. ಜೇಬು ಹರಿದ ಶರ್ಟನ್ನು ಜಪ್ತಮಾಡಿಕೊಂಡಿರುತ್ತೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಜೇಬು ಹರಿದ ಶರ್ಟ ಬಗ್ಗೆ ವಿಚಾರಿಸಿ ಜಪ್ತಪಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ವಿಚಾರಿಸಿ ಜಪ್ತಪಡಿಸಿಕೊಂಡಿರುತ್ತೇನೆಂದು ಸಾಕ್ಷಿ ನುಡಿಯುತ್ತಾರೆ. ಶರ್ಟಿನ ಜೇಬನ್ನು ಯಾವ ಆರೋಪಿತರು ಹರಿದಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಶರ್ಟಿನ ಜೇಬನ್ನು 4 ಜನ ಆರೋಪಿತರು ಹರಿದಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಶರ್ಟಿನ ಜೇಬನ್ನು 4 ಜನ ಆರೋಪಿತರು ಏಕಕಾಲಕ್ಕೆ ಹರಿದಿರುತ್ತಾರೆ ಅಥವಾ ಹೇಗೆ ಎಂದರೆ ಸಾಕ್ಷಿ ಶರ್ಟಿನ ಜೇಬನ್ನು 4 ಜನ ಆರೋಪಿತರು ಒಂದೇ ಸಮಯಕ್ಕೆ ಹರಿದಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಯಾವುದೇ ಛಾಯಾಚಿತ್ರ ಸೆರೆಹಿಡಿದಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣಾ ಅಂಕಿಸಂಖ್ಯೆಗೋಸ್ಕರ ನಮ್ಮ ಸಿಬ್ಬಂದಿ ವರ್ಗದವರು ಖೊಟ್ಟಿ ಪ್ರಕರಣ ದಾಖಲಿಸಿರುತ್ತಾರೆ ನಾನು ಸುಳ್ಳು ತನಿಖೆ ಮಾಡಿ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ತಯಾರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿ ಯಾವುದೇ ಸ್ವಖುಷಿ ಹೇಳಿಕೆ ನೀಡಿರುವುದಿಲ್ಲ ನಾನೇ ಒಂದು ಬಿಳಿ ಕಾಗದದ ಮೇಲೆ ಸಹಿಯನ್ನು ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. 1 ನೇ ಆರೋಪಿಗೆ ಸ್ವಖುಷಿ ಹೇಳಿಕೆಯಲ್ಲಿ ಬರೆದಿರುವ ವಿಷಯವನ್ನು ಓದಿ ಹೇಳಿರುವುದಿಲ್ಲ ನಾನೇ ಖೊಟ್ಟಿಯಾಗಿ ಸ್ವಖುಷಿ ಹೇಳಿಕೆಯನ್ನು ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಗಣಿ ಮತ್ತು ಭೂ ವಿಜ್ಞಾನಕ್ಕೆ ಕಳುಹಿಸಿಕೊಟ್ಟಿರುವ ಮರಳು ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ಆರೋಪಿತರು ಹಾಗು ಅವರ ವಾಹನಗಳು ಘಟನಾ ಸ್ಥಳದಲ್ಲಿ ಇರದೆ ಇದ್ದರು ಸಹ ಅವರ ಮೇಲೆ ಸುಳ್ಳು ದೋಷಾರೋಪಣೆ ಪಟ್ಟಿ ತಯಾರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ.